

ಡಾ.ವಿನೋದ ಛೆಬ್ಬಿ

ಸಾಕಷ್ಟು ದಂಪತಿಗಳು ಪ್ರಣಯಭಾವದ ಬದಲು ಭದ್ರಭಾವಕ್ಕೆ ಮಹತ್ವ ಕೊಟ್ಟು ಮದುವೆಯಾಗಿ ಸಮಸ್ಯೆಯನ್ನು ತಂದುಕೊಳ್ಳುತ್ತಾರೆ.

# 263: ಹೊಸ ದಾರಿ-3

ಸಂಗಾತಿಗಳ ನಡುವಿನ ಅಸಾಧ್ಯವೆನಿಸುವ ಜಗಳಗಳಿಗೆ ತಡೆಹಾಕಿ ಸುಖಸಂತೃಪ್ತಿಗಳನ್ನು ಬರಮಾಡಿಕೊಳ್ಳುವುದಕ್ಕೆ ದಾಂಪತ್ಯ ವಿಜ್ಞಾನದಲ್ಲಿ ದಾರಿಯಿದೆ ಎಂದು ಹೇಳುತ್ತಿದ್ದೆ. ಅದನ್ನು ಉದಾಹರಣೆಗಳ ಮೂಲಕ ವಿವರಿಸಲು ಜನಜನಿತ ದಾಂಪತ್ಯದ ಕೆಲವು ಮಾದರಿಗಳನ್ನು ಕೈಯಳತೆಯಲ್ಲಿ ಇಟ್ಟುಕೊಳ್ಳುವುದು ಅಗತ್ಯವಾಗುತ್ತದೆ. ಅದಕ್ಕಾಗಿ ನಾನು ಕಂಡ ನೂರಾರು ಸಮಸ್ಯಾತ್ಮಕ ದಾಂಪತ್ಯಗಳ ಸಾರವನ್ನು ಕ್ರೋಢೀಕರಿಸಿ ಪುನರ್ವಿಂಗಡಿಸಿ “ಸಂಯುಕ್ತ” ದಾಂಪತ್ಯ ಹುಟ್ಟಿಸಿ ಪ್ರಸ್ತುತಪಡಿಸುತ್ತಿದ್ದೇನೆ. ಈ ಜೋಡಿಗಳು ಪೂರ್ತಿ ಕಾಲ್ಪನಿಕ. ಹೋಲಿಕೆ ಕಂಡರೆ ಕಾಕತಾಳೀಯವಷ್ಟೆ. ಆದರೆ ಇದರಲ್ಲಿ ಬರುವ ಸನ್ನಿವೇಶಸಂದರ್ಭಗಳು, ಹೊಯ್ದಾಟ ತೊಳಲಾಟಗಳು, ಹತ್ತಿರ ದೂರ ಸರಿತಗಳು ಬಹುಶಃ ನಿಮ್ಮೆಲ್ಲರ ದಾಂಪತ್ಯಗಳಿಗೆ ಒಂದಿಲ್ಲೊಂದು ರೀತಿ ಅನ್ವಯಿಸಬಹುದು ಎಂದುಕೊಂಡಿದ್ದೇನೆ. ಹಾಗೆಯೇ, ಈ ದಾಂಪತ್ಯಗಳಲ್ಲಿ ಇಣುಕುವ ಬಹುತೇಕ ಸಂಗತಿಗಳು ಹಾಗೂ ಅದಕ್ಕವರು ಪ್ರತಿಕ್ರಿಯಿಸುವ ರೀತಿ ನಿಮ್ಮಲ್ಲೂ ಕಂಡುಬರಬಹುದು.

ಮಾಯಾ ಹಾಗೂ ಮನೋಜ (ಹೆಸರುಗಳೂ ಕಾಲ್ಪನಿಕ) ದಾಂಪತ್ಯದಲ್ಲಿದ್ದು ಎರಡು ದಶಕಗಳಿಗೂ ಮೇಲಾಗಿದೆ. ಅವರದು ಹಿರಿಯರು ವ್ಯವಸ್ಥೆಗೊಳಿಸಿದ ವಿವಾಹ. ಅವರ ಮಕ್ಕಳು ಹತ್ತೊಂಬತ್ತರ ಮಗಳು ಮಾನಸಿ, ಹಾಗೂ ಹದಿನೆಂಟರ ಮಗ ಮನೀಶ. ದಂಪತಿಯ ಸಂಬಂಧದಲ್ಲಿ ಎಂದೂ ಒಮ್ಮತವಿಲ್ಲ ಎನ್ನುವುದಕ್ಕೆ ಒಮ್ಮತವಿದೆ. ಅವರ ತೀವ್ರ ಭಿನ್ನಾಭಿಪ್ರಾಯಗಳು ಮದುವೆಗೆ ಮುಂಚೆಯೇ ಶುರುವಾಗಿದ್ದು, ನಂತರವೂ ಮುಂದುವರಿದಿವೆ. ನಡುನಡುವೆ ಸಂಧಾನವಾಗಿ ವಿರಸ ಬಗೆಹರಿದಂತೆ ಕಂಡರೂ ಅಸಮಾಧಾನ ಒಳಗೊಳಗೆ ಜೀವಂತವಿದ್ದು ಆಗಾಗ ಹೆಡೆಯೆತ್ತುತ್ತದೆ. ಜಗಳಕ್ಕೆ ಕಾರಣ ಇಂಥದ್ದೇ ಎಂದಿಲ್ಲ. ಹಣಕಾಸು, ಸಂಬಂಧಿಕರು, ಕಾಮಕೂಟ, ಪರಸ್ಪರ ಗುರುತಿಸುವ ಹಾಗೂ ಸ್ಪಂದಿಸುವ ರೀತಿ, ಬದುಕಿನ ಸಿದ್ಧಾಂತಗಳು, ಹವ್ಯಾಸಗಳು, ಅಭಿರುಚಿಗಳು, ಮಕ್ಕಳನ್ನು ಬೆಳೆಸುವ ರೀತಿ, ಮನೆಗೆಲಸ, ಹೊರಗೆಲಸ, ಕಾಯಿಲೆಗೆ ಹಾಗೂ ಸೋಲು ಗೆಲುವುಗಳಿಗೆ ಪ್ರತಿಕ್ರಿಯಿಸುವ ರೀತಿ, ರಾಜಕೀಯ ಅಭಿಮತ, ದುರಭ್ಯಾಸಗಳು. ಎಲ್ಲದರಲ್ಲೂ ಭಿನ್ನಾಭಿಪ್ರಾಯ ಇದೆ. ವರ್ಷಗಳಿಂದ ಚರ್ಚೆ, ವಾಗ್ವಾದ, ಜಗಳ ನಡೆಯುತ್ತಿದ್ದರೂ ಅವರ ನಿಲುವೇನೂ ಬದಲಾಗಿಲ್ಲ. ಮಾತಾಡಿದರೆ ಜಗಳದಲ್ಲಿ ಕೊನೆಗೊಳ್ಳುವುದು ಖಚಿತವಾಗಿ, ಹಲವು ವರ್ಷಗಳಿಂದ ಮಾತಾಡುವುದನ್ನೇ ನಿಲ್ಲಿಸಿದ್ದಾರೆ. ಇನ್ನೊಂದು ವಿಷಯ ಏನೆಂದರೆ, ಇವರಲ್ಲಿ ಲೈಂಗಿಕ ಸಂಪರ್ಕ ಒತ್ತಟ್ಟಿಗಿರಲಿ, ಪ್ರೀತಿಯ ಸ್ಪರ್ಶತಬ್ಬುಗೆಗಳೂ ನಿಂತು ಹಲವು ವರ್ಷಗಳಾಗಿವೆ. ಸಂಗಾತಿಯು ತನ್ನನ್ನು ತಾನಿರುವಂತೆಯೇ ಒಪ್ಪಿಕೊಂಡು ಗೌರವಿಸುತ್ತಿಲ್ಲ ಎಂಬ ನೋವು ಇಬ್ಬರಲ್ಲೂ ಇದೆ. ಇನ್ನು, ಮನೋಜ– ಮಾಯಾ ನಡುವಿನ ಸಂಬಂಧದ ಬಗೆಗೆ ಒಂದಿಷ್ಟು ಮಾಹಿತಿ:

ಇವರು ಒಬ್ಬರನ್ನೊಬ್ಬರು ಆಯ್ಕೆಮಾಡಲು ಏನು ಕಾರಣ? ಹಾಗೆ ನೋಡಿದರೆ ಇಬ್ಬರಿಗೂ ಮದುವೆಯಾಗುವ ವಿಚಾರವೇ ಇರಲಿಲ್ಲ. ಹಿರಿಯರ ಕಡೆಯಿಂದ ಒತ್ತಾಯವಿತ್ತು. ಓದು ಮುಗಿಸಿ ಉದ್ಯೋಗ ಸಿಕ್ಕಾಗ ಮಾಯಾ ಸ್ವಚ್ಛಂದತೆಯಿಂದ ಬದುಕಬೇಕು ಎಂದುಕೊಂಡಿದ್ದಳು. ಮನೆಯಿಂದ ಹೊರಬರುವುದು ಹೇಗೆ ಎನ್ನುತ್ತಿರುವಾಗ ಮದುವೆ ಸುಲಭ ಉಪಾಯವಾಯಿತು. ಆಕೆಗೆ ತೋರಿಸಿದ ಮೊದಲ ಹುಡುಗನೇ ಮನೋಜ. ನೋಡಲು ಚೆಲುವ. ಕೈತುಂಬ ವ್ಯವಹಾರವಿತ್ತು. ಅವನ ತಾಯ್ತಂದೆಯರು ಆಕೆಯನ್ನು ನಗುನಗುತ್ತ ಮಾತಾಡಿಸಿದರು. ಇನ್ನು, ಮನೋಜನಿಗೆ ಮಾಯಾಳ ಪ್ರಾಮಾಣಿಕ ಮಾತು, ನೇರ ನಡೆ, ಹಾಗೂ ಸರಕಾರಿ ಉದ್ಯೋಗ ಇಷ್ಟವಾದವು. ಆಕೆಯ ಹೆತ್ತವರಲ್ಲದೆ ಬಂಧುಬಳಗದವರೂ ಮನೋಜನನ್ನು ಗೌರವಾದರದಿಂದ ಕಂಡರು. ಇನ್ನು, ಇಂಥದ್ದೇ ತೀವ್ರವಾಗಿ ಇಷ್ಟವಾಯಿತು ಎಂದೇನೂ ಇಲ್ಲ; ಎಲ್ಲವೂ ಅನುಕೂಲವಾಗಿತ್ತು, ಅಷ್ಟೆ. “ಒಂದುವೇಳೆ ಇದೇ ಗುಣಗಳನ್ನು ಹೊಂದಿದ ಇನ್ನೊಬ್ಬರು ವ್ಯಕ್ತಿ ಸಿಕ್ಕಿದ್ದರೆ ಇಬ್ಬರ ಪೈಕಿ ಯಾರನ್ನು ಆರಿಸಿಕೊಳ್ಳುತ್ತಿದ್ದೀರಿ?” ಎಂಬ ಪ್ರಶ್ನೆಗೆ ಇಬ್ಬರೂ ಗೊಂದಲದಲ್ಲಿ ಬಿದ್ದರು. (ಅಂದರೆ, ಇಬ್ಬರ ನಡುವೆ ಮೊದಲ ನೋಟದ ಆಕರ್ಷಣೆಯಾಗಲೀ ಸೆಳೆತವಾಗಲೀ ಇರಲಿಲ್ಲ. ಒಬ್ಬರ ನಿರೀಕ್ಷೆಯ ಪಟ್ಟಿಯು ಇನ್ನೊಬ್ಬರ ನಿರೀಕ್ಷೆಯ ಪಟ್ಟಿಯೊಂದಿಗೆ ಹೊಂದಾಣಿಕೆಯಾದುದೇ ಸಾಕೆಂದು ಅಂದುಕೊಂಡಿದ್ದರು.)

ವಿವಾಹಪೂರ್ವದ ಒಡನಾಟದಲ್ಲಿ ಇಬ್ಬರೂ ಎಷ್ಟು ಹತ್ತಿರವಾಗಿದ್ದರು? ಅನುಭವ ಹೇಗಿತ್ತು? ಅವರು ಮೊಟ್ಟಮೊದಲು ಮುಖಾಮುಖಿಯಾಗಿದ್ದು “ತೋರಿಸುವ” ಸಮಾರಂಭದಲ್ಲಿ. ಅರ್ಧಗಂಟೆಯ ಮಾತುಕತೆಗೆ ಅವಕಾಶವಿತ್ತು. ಮನೋಜ ತನ್ನ ವಯಸ್ಸಾದ ಅನಾರೋಗ್ಯ ಪೀಡಿತ ತಾಯ್ತಂದೆಯರನ್ನು ನೋಡಿಕೊಳ್ಳುವ ಬಗೆಗೆ ಕೇಳಿದಾಗ ಮಾಯಾ ಒಪ್ಪಿದ್ದಳು. ಮಾಯಾಳ ಸರಕಾರಿ ಉದ್ಯೋಗವು ಮದುವೆಯ ನಂತರವೂ ಮುಂದುವರಿಸುವ ವಿಷಯದಲ್ಲಿ ಮನೋಜ ಒಪ್ಪಿದ.

ವಿವಾಹಪೂರ್ವ ಮೂರು ತಿಂಗಳಲ್ಲಿ ಇಬ್ಬರೂ ತಮ್ಮ ಕೆಲಸ, ಕುಟುಂಬ, ಸ್ನೇಹಿತರು ಎಂದು ಸಾಮಾಜಿಕ ಬದುಕಿನ ಬಗೆಗೆ ಹೇಳಿಕೊಂಡರೇ ವಿನಾ ಪರಸ್ಪರರ ಆಕರ್ಷಣೆಯ ಬಗೆಗೆ, ಅಥವಾ ವೈಯಕ್ತಿಕ ಆಸೆಆಕಾಂಕ್ಷೆಗಳ ಬಗೆಗೆ ವಿಶೇಷ ಮಾತಾಡಿಲ್ಲ. (ಅಂದರೆ, ಸ್ವಂತ ಮನಸ್ಸನ್ನು ಬಿಚ್ಚಿಟ್ಟು ಹಾರ್ದಿಕ ಬಂಧಕ್ಕೆ ಅಡಿಪಾಯ ಹಾಕಿದಂತಿಲ್ಲ.)

ಲೈಂಗಿಕ ವಿಷಯಗಳ ಬಗೆಗೆ ಮಾತಾಡಿದರೆ? ಶಾರೀರಿಕವಾಗಿ ಹತ್ತಿರವಾಗಿದ್ದರೆ? ಒಂದು ವರ್ಷ ಮಗು ಬೇಡವೆಂದು ಮಾತಾಡಿಕೊಂಡರಷ್ಟೆ. ಇನ್ನು, ಒಟ್ಟಿಗೆ ಮಲಗುವುದು ಶುರುವಾದಾಗ ಲೈಂಗಿಕ ಕ್ರಿಯೆಯೂ ನಡೆಯುತ್ತದೆ ಎಂದು ಭಾವಿಸಿದ್ದರಿಂದ ಅದರ ಬಗೆಗೆ ಏನೂ ಮಾತಾಡಿಲ್ಲ. (ಇಲ್ಲಿ ಅವರ ಲೈಂಗಿಕತೆಯು ಕಾಮಕ್ರಿಯೆಗೆ ಮಾತ್ರ ಸೀಮಿತವಾಗಿದೆ. ಪ್ರಣಯದ ಕಲ್ಪನೆಗಳನ್ನು ತೆರೆದಿಟ್ಟು ಹತ್ತಿರವಾಗುವ ಬಯಕೆ ಇಬ್ಬರಲ್ಲೂ ಕಂಡಿಲ್ಲ.)

ಅವರಲ್ಲಿ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡಿದ್ದು ಯಾವಾಗ? ಮದುವೆಗೆ ಮುಂಚೆಯೇ ಕೆಲವು ವಿಷಯಗಳಲ್ಲಿ ಅಸಮಾಧಾನವಿತ್ತು. ಉದಾಹರಣೆಗೆ, ಮಾಯಾ ಭೇಟಿಯಾಗಲು ಬಯಸಿದಾಗ ಅಥವಾ ಕರೆಮಾಡಿದಾಗ ಮನೋಜ ಸಿಗುತ್ತಿರಲಿಲ್ಲ. ದುಡಿಯುವುದರಲ್ಲಿ ಮಗ್ನನಾಗಿರುತ್ತಿದ್ದ. ಅವನು ಹೇಗೋ ಸಮಯ ಮಾಡಿಕೊಂಡು ಬಂದಾಗ ಮಾಯಾ ಇವೊತ್ತು ಸಮಯ ಸಿಕ್ಕಿತೇ ಎಂದು ವ್ಯಂಗ್ಯವಾಡುತ್ತಿದ್ದಳು. ಆಗಾಗ ಸಂಭಾಷಣೆಯಲ್ಲಿ ಬಿಗಿ ಬಂದಾಗ ಮಾತು ನಿಲ್ಲಿಸಿಬಿಡುತ್ತಿದ್ದರು. (ಸಮಸ್ಯೆಯಿಂದ ತಪ್ಪಿಸಿಕೊಂಡರೆ ಬಗೆಹರಿಯುವುದಿಲ್ಲ.)

ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಏನೇನು ಪ್ರಯತ್ನ ನಡೆಯಿತು? ಹಾಗೇನಿಲ್ಲ. ವ್ಯತ್ಯಾಸಗಳು ಸಹಜ; ಒಂದುಸಲ ಮದುವೆಯಾಗಿ ಒಟ್ಟಿಗೆ ಇರುವಂತಾದರೆ ತನ್ನಷ್ಟಕ್ಕೆ ತಾನೇ ಸರಿಹೋಗುತ್ತದೆ ಎಂದು ಭಾವಿಸಿದ್ದರು. ಒಂದುಸಲ ಇಬ್ಬರೂ ಬಿರುಮಾತಾಡಿ ದೂರವಾದಾಗ ಮನೋಜ ಮದುವೆ ಮುಂದೂಡಬೇಕು ಎಂದ. ಅವನ ತಾಯ್ತಂದೆಯರು ಒಪ್ಪಲಿಲ್ಲ. ಅಷ್ಟೊತ್ತಿಗೆ ಕರೆಯೋಲೆ ಹಂಚಿಯಾಗಿತ್ತು. (ಇವರಲ್ಲಿ ಸಾಮಾಜಿಕ ಪ್ರತಿಷ್ಠೆಗೆ ಇರುವ ಪ್ರಾಮುಖ್ಯತೆಯು ವೈಯಕ್ತಿಕ ಇಷ್ಟಾನಿಷ್ಟಗಳಿಗೆ ಇಲ್ಲವೆಂದು ಸ್ಪಷ್ಟವಾತ್ತದೆ.)

ಇನ್ನು, ಓದುಗರ ಚಿಂತನೆಗೆ ಕೆಲವು ಪ್ರಶ್ನೆಗಳು:

- ನೀವು ಮದುವೆಯಾಗಿದ್ದು ಏಕೆ? ವೈಯಕ್ತಿಕವಾದ ಬಯಕೆಯಿತ್ತೆ ಇತರರ ಆಗ್ರಹವೆ? ಇದೇ ಸಂಗಾತಿಯನ್ನು ಆರಿಸಿಕೊಳ್ಳಲು ಏನು ಕಾರಣ?
- ಮದುವೆಗೆ ಮುಂಚೆ ಇಬ್ಬರೂ ಎಷ್ಟು ಹತ್ತಿರವಾಗಿದ್ದಿರಿ? ಬಿಚ್ಚುಮನದ ಮಾತುಕತೆ ನಡೆಯುತ್ತಿತ್ತೆ?
- ವಿವಾಹಪೂರ್ವ ಲೈಂಗಿಕ ಸಂಬಂಧದ ಬಗ್ಗೆ ನಿಮ್ಮ ಅಭಿಪ್ರಾಯವೇನು?
- ನಿಮ್ಮ ನಡುವೆ ಯಾವ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳು ಬಂದಿವೆ?

ನಿಮ್ಮ ಅಭಿಪ್ರಾಯಗಳು ನಿಮಗೂ ಸಂಗಾತಿಗೂ ಕಿರಿಕಿರಿ ಆದರೂ ಅಡ್ಡಿಯಿಲ್ಲ, ಪ್ರಾಮಾಣಿಕ ಆಗಿರಲಿ. ಲಿಖಿತರೂಪದಲ್ಲಿ ಬರೆದಿಟ್ಟುಕೊಳ್ಳಿ. ಮನಸ್ಸಾದರೆ ನನ್ನೊಂದಿಗೆ ಹಂಚಿಕೊಳ್ಳಿ. ಸೂಕ್ತವಾದವುಗಳನ್ನು ಲೇಖನದ ಮುಖ್ಯವಾಹಿನಿಯಲ್ಲಿ (ವೈಯಕ್ತಿಕ ಮಾಹಿತಿ ಬಯಲು ಮಾಡದೆ) ಸೇರಿಸಿಕೊಳ್ಳುತ್ತೇನೆ.

ಹಂಚಿಕೊಳ್ಳುವ ದೂರವಾಣಿ ಸಂಖ್ಯೆ: **8494933888; Email: vinod.chebbi@gmail.com**